ಜೀವಾವಧಿ | ಸಾರ್ವಜನಿಕ ಸೇವಕನಾಗಿ ಸೆಂಗರ್ ನಂಬಿಕೆ ದ್ರೋಹ ಮಾಡಿದ್ದಾನೆ: ಕೋರ್ಟ್ ಅಸಮಾಧಾನ

# ಉನ್ನಾವ್ ರೇಪಿಸ್ಟ್ ಸೆಂಗರ್‌ಗೆ ಜೀವನಪೂರ್ತಿ ಜೈಲು

## ಬಿಜೆಪಿ ಉಚ್ಚಾಟಿತ ಶಾಸಕಗೆ ₹25 ಲಕ್ಷ ದಂಡ ಹೇರಿದ ದಿಲ್ಲಿ ಕೋರ್ಟ್ | ತೀರ್ಪು ಹೊರಬೀಳುತ್ತಿದ್ದಂತೆ ಸೆಂಗರ್ ಕಣ್ಣೀರು

ನವದೆಹಲಿ: 2017ರಲ್ಲಿ ಉತ್ತರ ಪ್ರದೇಶದ ಉನ್ನಾವ್‌ನಲ್ಲಿ ನಡೆದಿದ್ದ ಅಪ್ರಾಪ್ತೆಯ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಬಿಜೆಪಿಯ ಉಚ್ಚಾಟಿತ ಶಾಸಕ ಕುಲದೀಪ್ ಸಿಂಗ್ ಸೆಂಗರ್‌ಗೆ ದಿಲ್ಲಿ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ. ದಿಲ್ಲಿ ಜಿಲ್ಲಾ ನ್ಯಾಯಾಧೀಶ ಧರ್ಮೇಶ್ ಶರ್ಮಾ ಅವರು ಶುಕ್ರವಾರ ಸೆಂಗರ್‌ಗೆ ಶಿಕ್ಷೆ ಪ್ರಮಾಣ ಪ್ರಕಟಿಸಿದ್ದಲ್ಲದೆ, ₹25 ಲಕ್ಷ ದಂಡ ವಿಧಿಸಿದರು. ಈ ದಂಡದ ಮೊತ್ತವನ್ನು 1 ತಿಂಗಳ ಒಳಗೆ ಸಂತ್ರಸ್ತೆಗೆ ನೀಡಬೇಕು. ಇದನ್ನು ಪಾವತಿಸಲು ಸೆಂಗರ್ ವಿಫಲನಾದರೆ ಉತ್ತರಪ್ರದೇಶ ಸರ್ಕಾರ ತನ್ನ ಬೊಕ್ಕಸದಿಂದ ನೀಡಬೇಕು ಎಂದು ಅವರು ಆದೇಶಿಸಿದರು. ಹೆಚ್ಚುವರಿ 10 ಲಕ್ಷ ರು.ಗಳನ್ನು ಸಂತ್ರಸ್ತೆಯ ತಾಯಿಗೆ ನೀಡಬೇಕು ಎಂದೂ ಅವರು ಸೂಚಿಸಿದರು.

'ಶಿಕ್ಷೆ ಪ್ರಮಾಣ ಕಡಿಮೆ ಮಾಡುವ ಯಾವುದೇ ವಾಸ್ತವಾಂಶಗಳು ಕಾಣುತ್ತಿಲ್ಲ. ಸೆಂಗರ್ ಸಾರ್ವಜನಿಕ ಸೇವಕನಾಗಿದ್ದು, ಜನರ ನಂಬಿಕೆಗೆ ದ್ರೋಹ ಮಾಡಿದ್ದಾನೆ. ಅಲ್ಲದೆ, ಸಂತ್ರಸ್ತೆಯನ್ನು ಬೆದರಿಸುವ ಕೆಲಸವನ್ನೂ ಮಾಡಿದ್ದಾನೆ' ಎಂದು ಹೇಳಿದ ಕೋರ್ಟ್, ಶಿಕ್ಷೆ ಪ್ರಮಾಣದಲ್ಲಿ ದಯೆ ತೋರಬೇಕು ಎಂಬ ದೋಷಿಯ ಕೋರಿಕೆ ತಿರಸ್ಕರಿಸಿತು.

ಶಿಕ್ಷೆ ಪ್ರಮಾಣ ಪ್ರಕಟವಾಗುತ್ತಿದ್ದಂತೆಯೇ ನ್ಯಾಯಾಧೀಶರ ಮುಂದೆಯೇ 53 ವರ್ಷದ ಸೆಂಗರ್ ಕಣ್ಣೀರು ಹಾಕಿದ. ಕಲಾಪ ಮುಗಿದ ಬಳಿಕ ಪೊಲೀಸರ ಜತೆ ಸಾಗುವಾಗ ಮಗಳು ಹಾಗೂ ಸೋದರಿ ಸೆಂಗರ್‌ನನ್ನು ಭೇಟಿ ಮಾಡಿದರು. ಆಗಲೂ ಉಚ್ಚಾಟಿತ ಬಿಜೆಪಿ ಶಾಸಕ ಅತ್ತುಬಿಟ್ಟ.



### ಗಲ್ಲು ಶಿಕ್ಷೆಯಿಂದ ಬಚಾವ್ ಏಕೆ?

ಪೋಕ್ಸೋ (ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ) ಕಾಯ್ದೆ ಅನ್ವಯ ಸೆಂಗರ್‌ಗೆ ಈಗ ಜೀವಾವಧಿ ಸಜೆ ಪ್ರಕಟವಾಗಿದೆ. ಈ ಕಾಯ್ದೆಗೆ ಇದೇ ವರ್ಷದ ಆಗಸ್ಟ್‌ನಲ್ಲಿ ತಿದ್ದುಪಡಿ ತಂದು, ದೋಷಿಗೆ ಗಲ್ಲು ಶಿಕ್ಷೆ ವಿಧಿಸುವ ಮಹತ್ವದ ಅಂಶವನ್ನು ಸೇರಿಸಲಾಗಿತ್ತು. ಆದರೆ ಸೆಂಗರ್ ಭಾಗಿಯಾಗಿರುವ ಉನ್ನಾವ್ ಅತ್ಯಾಚಾರ ಪ್ರಕರಣ ನಡೆದಿದ್ದು 2017ರಲ್ಲಿ. ಅಂದರೆ ಕಾಯ್ದೆ ತಿದ್ದುಪಡಿ ಆಗುವ ಮುನ್ನ ನಡೆದಿದ್ದು. ಹೀಗಾಗಿ ಸೆಂಗರ್‌ಗೆ ಗಲ್ಲು ಶಿಕ್ಷೆ ಪ್ರಕಟವಾಗಿಲ್ಲ.